


# ಕೆರೆ ಸಮ್ಮೇಳನ 2014: ಪಶ್ಚಿಮ ಘಟ್ಟ ಪ್ರದೇಶದಲ್ಲಿ ಜೌಗುಭೂಮಿ ಪರಿಸರ ವ್ಯವಸ್ಥೆಯ ಸಂರಕ್ಷಣೆ ಮತ್ತು ಸಮರ್ಥ ನಿರ್ವಹಣೆಯ ಕುರಿತು ಸಮ್ಮೇಳನ

ದಿನಾಂಕ: 13–15 ನವೆಂಬರ್, 2014

ಸ್ಥಳ: ಪರಿಸರ ಸಭಾಂಗಣ, ಸಿರ್ಸಿ

ಜಾಲತಾಣ: http://ces.iisc.ernet.in/energy

ಮಿಂಚಂಚೆ: lake2014@ces.iisc.ernet.in; lake2014symposium@gmail.com; cestvr@ces.iisc.ernet.in; energy@ces.iisc.ernet.in

| **ಆಯೋಜಕರು:** | |
|---|---|
| ಶಕ್ತಿ ಮತ್ತು ಜೌಗುಭೂಮಿ ಸಂಶೋಧನಾ ತಂಡ,<br>ಪರಿಸರ ವಿಜ್ಞಾನ ಕೇಂದ್ರ,<br>ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು – 560 012 | |
| ಗ್ರಾಮಾಭ್ಯುದಯ ಘಟಕ,<br>ಶ್ರೀ ಸ್ವರ್ಣವಲ್ಲೀ ಮಹಾಸಂಸ್ಥಾನ,<br>ಸೋಂದಾ, ಸಿರ್ಸಿ | ವೃಕ್ಷ ಲಕ್ಷ ಆಂದೋಲನ, ಕರ್ನಾಟಕ |
| ಜೀವವಿಜ್ಞಾನ ಅಧ್ಯಯನ ಕೇಂದ್ರ,<br>ಅಸ್ಸಾಮ್ ವಿಶ್ವವಿದ್ಯಾಲಯ, ಸಿಲ್‌ಚರ್ | ಪರಿಸರ ವಿಜ್ಞಾನ ಅಧ್ಯಯನ ಕೇಂದ್ರ,<br>ಮಹಾತ್ಮ ಗಾಂಧಿ ವಿಶ್ವವಿದ್ಯಾಲಯ,<br>ಕೊಟ್ಟಾಯಮ್, ಕೇರಳ |
| ಕರ್ನಾಟಕ ರಾಜ್ಯ ವಿಜ್ಞಾನ ಮತ್ತು<br>ತಂತ್ರಜ್ಞಾನ ಮಂಡಳಿ, ಬೆಂಗಳೂರು | ಕೆ.ಕೆ. ಪ್ರೌಢ ಶಾಲೆ, ವರ್ತೂರು,<br>ಬೆಂಗಳೂರು |
| ವಿದ್ಯಾನಿಕೇತನ ಪಬ್ಲಿಕ್ ಶಾಲೆ, ಉಳ್ಳಾಲ,<br>ಬೆಂಗಳೂರು | ವಾಗ್ದೇವಿ ವಿಲಾಸ ಸಂಸ್ಥೆ, ಬೆಂಗಳೂರು |

| ಸಹಕಾರ: | |
|---|---|
| ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ, ಬೆಂಗಳೂರು | ಶಾರದಾಂಬಾ ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಘ (ರಿ.), ಭೈರುಂಬೆ |
| ಗ್ರಾಮ ಅರಣ್ಯ ಸಮಿತಿ, ಶೀಗೇಹಳ್ಳಿ, ಸಿರ್ಸಿ | ಸ್ನೇಹಕುಂಜ, ಹೊನ್ನಾವರ |
| ಕರ್ನಾಟಕ ರಾಜ್ಯ ಸಂಶೋಧನಾ ಸಂಸ್ಥೆ | ಲಯನ್ಸ್ ಇಂಗ್ಲೀಷ್ ಶಾಲೆ, ಸಿರ್ಸಿ |

## ಮುನ್ನುಡಿ:

ಶಕ್ತಿ ಮತ್ತು ಜೌಗುಭೂಮಿ ಸಂಶೋಧನಾ ತಂಡ, ಪರಿಸರ ವಿಜ್ಞಾನ ಕೇಂದ್ರ, ಭಾರತೀಯ ವಿಜ್ಞಾನ ಸಂಸ್ಥೆಯಿಂದ ಆರಂಭಗೊಂಡ, ಕೆರೆಯ ಸಂರಕ್ಷಣೆ ಮತ್ತು ಸಮರ್ಥ ನಿರ್ವಹಣೆಯ ಕುರಿತಾದ ಚರ್ಚೆ ಕಾಲಾಂತರದಲ್ಲಿ "**ಕೆರೆ ಸಮ್ಮೇಳನ**" ಎಂದೇ ಪ್ರಸಿದ್ಧಿಯಾಯಿತು. ಮೊಟ್ಟ ಮೊದಲ "ಕೆರೆ ಸಮ್ಮೇಳನ" 1998ರಲ್ಲಿ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ನಡೆಯಿತು. ನಂತರದಲ್ಲಿ (2000 ದಿಂದ), ವಿವಿಧ ಶೈಕ್ಷಣಿಕ, ಸರ್ಕಾರಿ ಮತ್ತು ಸರ್ಕಾರೇತರ ಸಂಘ–ಸಂಸ್ಥೆಗಳಿಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ಅನುವು ಮಾಡಿಕೊಡಲಾಯಿತು. ಕೆರೆ ಸಮ್ಮೇಳನದ ಮೂಲ ಉದ್ದೇಶವಾದ ಪರಿಸರ ಸಂರಕ್ಷಣೆ, ಪುನರುಜ್ಜೀವನ ಮತ್ತು ನಿರ್ವಹಣೆಯ ಮುಖ್ಯ ಕಳಕಳಿ ಜಲವಿಜ್ಞಾನ, ಭೂವಿಜ್ಞಾನ, ಸಾರ್ವಜನಿಕ ಭಾಗವಹಿಸುವಿಕೆ, ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಪಾತ್ರ ಹಾಗೂ ಭವಿಷ್ಯದ ಸಂಶೋಧನಾ ಅಗತ್ಯಗಳನ್ನು ಪ್ರಚೋದಿಸುವುದಾಗಿದೆ. **ಕೆರೆ ಸಮ್ಮೇಳನ 2014**, ಇದು 9ನೇ ದ್ವೈವಾರ್ಷಿಕ ಸಮ್ಮೇಳನವಾಗಿದ್ದು, "ಪಶ್ಚಿಮ ಘಟ್ಟ ಪ್ರದೇಶದಲ್ಲಿ ಜೌಗುಭೂಮಿ ಪರಿಸರ ವ್ಯವಸ್ಥೆಯ ಸಂರಕ್ಷಣೆ ಮತ್ತು ಸಮರ್ಥ ನಿರ್ವಹಣೆ" ಎಂಬ ವಿಷಯದ ಮೇಲೆ ಕೇಂದ್ರೀಕೃತವಾಗಿದೆ. ಜಾಗತಿಕ ಜೌಗುಭೂಮಿ ದಿನ 2014ರ ವಸ್ತು, "**ಜೌಗುಭೂಮಿ ಮತ್ತು ವ್ಯವಸಾಯ: ಸಂಯೋಜಿತ ಫಲಿತಾಂಶಕ್ಕಾಗಿ ಜೌಗುಭೂಮಿ ಮತ್ತು ವ್ಯವಸಾಯ ಕ್ಷೇತ್ರಗಳ (ನೀರಿನ ಮೂಲಗಳನ್ನು ಒಳಗೊಂಡು) ಒಟ್ಟುಗೂಡುವಿಕೆಯ ಅವಶ್ಯಕತೆಗಳು**" ಎಂಬುದಾಗಿದ್ದು, ಪ್ರಸ್ತುತ ಸಮ್ಮೇಳನವು ಆಹಾರ ಉತ್ಪಾದನೆಯಲ್ಲಿ ಜೌಗುಭೂಮಿಯ ಪ್ರಾಮುಖ್ಯವನ್ನು ಅರಿತುಕೊಳ್ಳಲು ಮತ್ತು ಇಂತಹ ಸೂಕ್ಷ್ಮ ಪರಿಸರ ವ್ಯವಸ್ಥೆಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಚರ್ಚಿಸಲು ಮುಕ್ತ ವೇದಿಕೆಯನ್ನು ಒದಗಿಸುತ್ತದೆ.

ಕೆರೆಗಳು ಜೀವ–ವೈವಿಧ್ಯತೆಯ ತೊಟ್ಟಿಲಾಗಿದ್ದು, ಅಸಂಖ್ಯ ಜಲ ಹಾಗೂ ಭೂ ಜೀವಿಗಳ ಉಳಿವಿಗೆ ಅತ್ಯವಶ್ಯಕವಾದ ನೀರು ಮತ್ತು ಆಹಾರವನ್ನು ಒದಗಿಸುತ್ತವೆ. ಇಂತಹ ಪರಿಶುದ್ಧ ಪರಿಸರ ವ್ಯವಸ್ಥೆಯು, ಭೂ ಕವಚದಲ್ಲಾಗುವ ಬದಲಾವಣೆ, ಅರಣ್ಯ ನಾಶ, ಜೀವಿಗಳ ವಾಸಸ್ಥಾನದ ಛಿದ್ರಗೊಳ್ಳುವಿಕೆ, ಪರಿಸರ ಮಾಲಿನ್ಯ, ಅವ್ಯವಸ್ಥಿತ ತ್ಯಾಜ್ಯ ವಿಲೇವಾರಿ (ಘನ ಮತ್ತು ದ್ರವ) ಹಾಗು ಆರ್ಥಿಕ ಉತ್ಪಾದನೆ ಮತ್ತು ಪರಿಸರೀಯ ಭದ್ರತೆಗೆ ಸಂಬಂಧಿಸಿದ ಘಟನೆಗಳಿಂದ ಅವನತಿಯ ಅಂಚಿಗೆ ಸರಿಯುತ್ತಿದೆ. ಭೂ ಕವಚದಲ್ಲಾಗುವ ಬದಲಾವಣೆಗಳು ಕೆರೆಗಳ ರಚನಾತ್ಮಕ ಮಾರ್ಪಾಡಿಗೆ ಕಾರಣವಾಗುತ್ತವೆ ಮತ್ತು ಇವು ಜಲ ಹರಿವು, ಭೂ ಹಾಗೂ ಜೀವ

ರಾಸಾಯನಿಕ ಮತ್ತು ಪೋಷಕಾಂಶ ಚಕ್ರಗಳ ಮೇಲೆ ವ್ಯತಿರೀಕ್ತ ಪರಿಣಾಮವನ್ನುಂಟು ಮಾಡುತ್ತವೆ. ಈ ಎಲ್ಲ ಬದಲಾವಣೆಗಳಿಂದ, ವರ್ಷವಿಡೀ ಹರಿಯುತ್ತಿದ್ದ ಪುರಾತನ ಝರಿ–ತೊರೆಗಳು ಕಣ್ಮರೆಯಾಗುತ್ತಿದ್ದು ಮ(ಳೆ)ಲೆನಾಡಿನಲ್ಲಿ ಮುಂಬರುವ ಜಲಕ್ಷಾಮದ ಭೀಕರತೆಯನ್ನು ಸೂಚಿಸುತ್ತಿದೆ. ಪರಿಸರದಲ್ಲಾಗುತ್ತಿರುವ ಬದಲಾವಣೆಗಳಿಂದ ಜೀವ–ವೈವಿಧ್ಯತೆಯ ಮೇಲಾಗುತ್ತಿರುವ ದುಷ್ಪರಿಣಾಮ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದಕ್ಕೆ ಜಗತ್ತಿನಾದ್ಯಂತ ಪುರಾವೆ ದೊರೆಯುತ್ತಿದೆ. ಹವಾಮಾನದ ಬದಲಾವಣೆ ಹಾಗೂ ಹಿಮ ಪ್ರದೇಶಗಳ ಕರಗುವಿಕೆಗಳು ಜಲ ಹರಿವಿನಲ್ಲಾಗುವ ಏರುಪೇರುಗಳಿಗೆ ಪ್ರಮುಖ ಕಾರಣ ಮತ್ತು ಇದು ಪ್ರವಾಹ ಅಥವಾ ಬರಗಾಲಕ್ಕೆ ಕಾರಣವಾಗಬಹುದು. ಜಲ ಹರಿವಿನಲ್ಲಾಗುವ ಬಹುತೇಕ ಬದಲಾವಣೆಗಳು ಸಿಹಿನೀರಿನ ಪರಿಸರದಲ್ಲಿ ಅಥವಾ ಜೌಗು ಭೂಪ್ರದೇಶದಲ್ಲಿ ಬಿಂಬಿತವಾಗುತ್ತವೆ. ಪ್ರಮುಖ ಜೈವಿಕ ಪರಿಣಾಮಗಳೆಂದರೆ ಜೀವ–ವೈವಿಧ್ಯತೆಯಲ್ಲಿ ಇಳಿಮುಖ, ಆವಾಸಗಳಿಗೆ ಹಾನಿ, ಜಲಚರಗಳ ಸಂತಾನೋತ್ಪತ್ತಿ ಪ್ರದೇಶಗಳ ನಾಶ, ಒಳನಾಡು ಮತ್ಸ್ಯ ಸಂಪನ್ಮೂಲಗಳಲ್ಲಿ ಇಳಿಕೆಮತ್ತು ವಿವಿಧ ಸಸ್ಯ ವರ್ಗಗಳ ನಾಶ. ಸುಸ್ಥಿರ ನಿರ್ವಹಣೆ ಮತ್ತು ಪರಿಸರ ಪೂರಕ ಅಭಿವೃದ್ಧಿ ಯೋಜನೆಗಳಿಂದ ನೈಸರ್ಗಿಕ ಸಂಪನ್ಮೂಲಗಳನ್ನು ಕಾಪಾಡುವುದೊಂದೇ ನಮ್ಮ ಭದ್ರ ಭವಿಷ್ಯದ ಕೀಲಿಕೈ. ಜಲ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಸಂರಕ್ಷಿಸುವ ಕ್ರೀಯಾ ಯೋಜನೆಯ ರಚನೆ ಮತ್ತು ಅನುಷ್ಠಾನಕ್ಕೆ, ಅದಕ್ಕಿರುವ ಸಮಸ್ಯೆಗಳು ಹಾಗೂ ಸೂಕ್ತ ಪರಿಹಾರಗಳನ್ನು ಅರ್ಥೈಸಿಕೊಳ್ಳುವುದು ಅತ್ಯವಶ್ಯ. ಈ ನಿಟ್ಟಿನಲ್ಲಿ ಕ್ರಮಗಳೆಂದರೆ:

- ಎಲ್ಲಾ ಪಾಲುದಾರರನ್ನೂ, ಜಲಮೂಲಗಳ ಅಭಿವೃದ್ಧಿ/ಸಂರಕ್ಷಣೆ ಯೋಜನೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೋತ್ಸಾಹಿಸುವುದು ಹಾಗೂ ಪ್ರತಿ ವ್ಯಕ್ತಿ/ಸಂಸ್ಥೆಯು ಭಾಗವಹಿಸುವಂತೆ ನೋಡಿಕೊಳ್ಳುವುದು
- ಅಂತರಾಜ್ಯ ಯೋಜನೆಗಳನ್ನು ಸ್ಥಳೀಯ ಸಮುದಾಯ ಅಥವಾ ಸರಕಾರೇತರ ಸಂಸ್ಥೆಗಳ ಪಾಲುದಾರಿಕೆಯಲ್ಲಿ ಆರಂಭಿಸುವಂತೆ ಪ್ರೋತ್ಸಾಹಿಸುವುದು.
- ಹೆಚ್ಚಿನ ನೈಸರ್ಗಿಕ, ಆರ್ಥಿಕ, ಪ್ರದರ್ಶನಾತ್ಮಕ ಮತ್ತು ಮನೋರಂಜನಾ ಮೌಲ್ಯಗಳನ್ನು ಹೊಂದಿರುವ ಜಲ ಸಂಪನ್ಮೂಲಗಳನ್ನು ಗುರುತಿಸುವುದು.
- ಜಲ ಮೂಲಗಳಿಗೆ ಆಗಬಹುದಾದ ಸಂಭವನೀಯ ಹಾನಿಗಳನ್ನು ಮುಂಚಿತವಾಗಿ ಗುರುತಿಸಿ ವಿಶ್ಲೇಷಿಸುವುದು.
- ಜಲ ಮತ್ತು ಭೂ ಸಂಪನ್ಮೂಲಗಳ ಪುನರುಜ್ಜೀವನ, ನಿರ್ವಹಣೆ ಹಾಗೂ ಮೌಲ್ಯ ವರ್ಧನೆಗೆ ಪೂರಕವಾದ ನೀತಿ ಮತ್ತು ಯೋಜನೆಗಳ ಅನುಷ್ಠಾನಕ್ಕೆ ಆಗ್ರಹಿಸುವುದು.

## ಧ್ಯೇಯ:

**ಕೆರೆ ಸಮ್ಮೇಳನ** 2014 –*"ಜೌಗುಭೂಮಿ ಮತ್ತು ವ್ಯವಸಾಯ: ಸಂಯೋಜಿತ ಫಲಿತಾಂಶಕ್ಕಾಗಿ ಜೌಗುಭೂಮಿ ಮತ್ತು ವ್ಯವಸಾಯ ಕ್ಷೇತ್ರಗಳ (ನೀರಿನ ಮೂಲಗಳನ್ನು ಒಳಗೊಂಡು) ಒಟ್ಟುಗೂಡುವಿಕೆಯ ಅವಶ್ಯಕತೆಗಳು".* ಕೆರೆ ಸಮ್ಮೇಳನ 2014ರ ಉದ್ದೇಶ ಕೇವಲ ವಿಜ್ಞಾನಿ ಸಮುದಾಯದ ಜ್ಞಾನಾರ್ಜನೆಯಷ್ಟೇ ಅಲ್ಲದೇ, ವಿದ್ಯಾರ್ಥಿಗಳಲ್ಲಿ, ಶಿಕ್ಷಕರಲ್ಲಿ ಹಾಗೂ

ಸಾರ್ವಜನಿಕರಲ್ಲಿ ಅರಿವು ಮೂಡಿಸುವುದರ ಮೂಲಕ ಅವರನ್ನೂ ಸಹ ಈ ಕಾರ್ಯಕ್ರಮದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದಾಗಿದೆ. ಇದು ವಿಜ್ಞಾನಿಗಳಿಗೆ, ಶಿಕ್ಷಕರಿಗೆ, ಸರ್ಕಾರಿ ಮತ್ತು ಸರಕಾರೇತರ ಸಂಸ್ಥೆಗಳಿಗೆ ಪರಿಸರ ಮತ್ತು ಜೌಗು ಭೂಮಿಮೇಲಿನ ಜಿಜ್ಞಾಸೆಗೆ ವೇದಿಕೆಯನ್ನು ಒದಗಿಸುತ್ತದೆ. ವಿವಿಧ ಸಂಸ್ಥೆ ಮತ್ತು ತಜ್ಞರ ನಡುವೆ ಸದೃಢ ಸಂಪರ್ಕ ನೆಲೆಸಲು ಹಾಗೂ ದುರ್ಬಲ ಪರಿಸರದ ಸಂರಕ್ಷಣೆ ಮತ್ತು ನಿರ್ವಹಣೆಗೆ ಅಗತ್ಯವಾದ ಸಮರ್ಥ ಯೋಜನೆಗಳ ರಚನೆಗೆ ಕೆರೆ ಸಮ್ಮೇಳನ ಸಹಾಯಕವಾಗಬಲ್ಲದು. ಸಮ್ಮೇಳನದ ಭಾಗವಾಗಿ, ಆಯ್ದ ವಿಜ್ಞಾನಿಗಳಿಂದ ವಿವಿಧ ವಿಷಯಗಳ ಮೇಲೆ ಉಪನ್ಯಾಸವನ್ನು ಹಾಗೂ ವಿದ್ಯಾರ್ಥಿಗಳಿಂದ ಮತ್ತು ಸಂಶೋಧಕರಿಂದ ವಸ್ತುನಿಷ್ಠ ಪ್ರಬಂಧ ಮಂಡನೆಯನ್ನು ಏರ್ಪಡಿಸಲಾಗಿದೆ.

## ಉದ್ದೇಶಗಳು:

ಕೆರೆ ಸಮ್ಮೇಳನ 2014ರ ಉದ್ದೇಶಗಳು ಈ ರೀತಿಯಾಗಿವೆ:

1. ಪಶ್ಚಿಮ ಘಟ್ಟ ಪ್ರದೇಶದ ಜೌಗು ಭೂಮಿ, ಕೆರೆ, ಜಡ್ಡಿ, ಝರಿ, ಕೊಳ, ಸರೋವರ ಮತ್ತು ನದಿಗಳ ಪ್ರಸಕ್ತ ಸ್ಥಿತಿಯ ಅಧ್ಯಯನ ಹಾಗೂ ಸಂರಕ್ಷಣಾ ಕ್ರಮಗಳ ಬಗ್ಗೆ ಚಿಂತನೆ
2. ವಿಜ್ಞಾನಿಗಳಿಂದ, ವೃತ್ತಿಪರರಿಂದ ಹಾಗೂ ವಿದ್ಯಾರ್ಥಿಗಳಿಂದ ಜೀವ–ವೈವಿಧ್ಯತೆ, ಪರಿಸರ ಹಾನಿ ಮತ್ತು ಸಂರಕ್ಷಣಾ ಕ್ರಮಗಳು ಹಾಗೂ ಪ್ರಚಲಿತ ವಿದ್ಯಮಾನಗಳ ಕುರಿತು ಸಂಶೋಧನಾ ಫಲಿತಾಂಶಗಳ ಮೇಲೆ ಉಪನ್ಯಾಸ
3. ಜೌಗು ಭೂಮಿ ಪುನರುಜ್ಜೀವನ, ನಿರ್ವಹಣೆ ಸಂರಕ್ಷಣಾ ಕ್ರಮಗಳ ಬಗ್ಗೆ ಪ್ರಸಕ್ತ ಸಮ್ಮೇಳನದಲ್ಲಿ ಚರ್ಚಿಸುವುದು.
4. ಇದರಲ್ಲಿ ಧಾರ್ಮಿಕ, ಸರಕಾರೇತರ ಮತ್ತು ಶೈಕ್ಷಣಿಕ ಸಂಸ್ಥೆಗಳ ಪಾತ್ರ
5. ಜನರ ಜೀವನಾಧಾರ ಮತ್ತು ಮೂಲಭೂತ ಅಗತ್ಯತೆಗಳನ್ನು ಪೂರೈಸಲು ಸಂಪನ್ಮೂಲಗಳ ಉಪಯೋಗವನ್ನು ವೈಜ್ಞಾನಿಕವಾಗಿ ನಿರ್ಧರಿಸುವುದರ ಬಗ್ಗೆ ಸಾರ್ವಜನಿಕರೊಂದಿಗೆ ಚರ್ಚೆ
6. ವಿದ್ಯಾರ್ಥಿಗಳಿಂದ ಜೌಗು ಭೂಮಿ, ಜೀವ–ವೈವಿಧ್ಯತೆ, ಪರಿಸರ ಹಾನಿ ಮತ್ತು ಸಂರಕ್ಷಣಾ ಕ್ರಮಗಳು, ಪ್ರಚಲಿತ ವಿದ್ಯಮಾನಗಳ ಕುರಿತು ದಾಖಲಿಸಿದ ಮಾಹಿತಿಗಳು ಹಾಗೂ ಸಂಶೋಧನಾ ಫಲಿತಾಂಶಗಳ ಮೇಲೆ ಉಪನ್ಯಾಸ
7. ದುರ್ಬಲ ಪರಿಸರದ ಸಂರಕ್ಷಣೆ ಮತ್ತು ನಿರ್ವಹಣೆಗೆ ಅಗತ್ಯವಾದ ಮಾನವ ಮತ್ತು ಹಣಕಾಸಿನ ಸಂಪನ್ಮೂಲಗಳ ಹಂಚಿಕೆ.
8. ಜೌಗು ಭೂಮಿ ಜೀವ–ವೈವಿಧ್ಯತೆಯ ಪುನರುಜ್ಜೀವನ, ನಿರ್ವಹಣೆ ಹಾಗೂ ಸಂರಕ್ಷಣೆಗೆ ವಿದ್ಯಾರ್ಥಿಗಳಿಂದ ಮತ್ತು ಸರಕಾರೇತರ ಸಂಸ್ಥೆಗಳಿಂದ ಕ್ರೀಯಾ ಯೋಜನೆಯ ಪ್ರಸ್ತಾಪ.
9. ಪಶ್ಚಿಮ ಘಟ್ಟ ಪ್ರದೇಶದಲ್ಲಿನ ಪರಿಸರ ಸಂರಕ್ಷಣೆ ಮತ್ತು ನಿರ್ವಹಣೆಯ ಸಂಶೋಧನಾ ಅಗತ್ಯತೆಗಳನ್ನು ರೂಪಿಸಲು ಕೈಗೊಳ್ಳಬಹುದಾದ ಕ್ರಮಗಳ ಕುರಿತು ಚರ್ಚೆ.

## ಸಂಶೋಧನಾ ಪ್ರಬಂಧದ ವಿಷಯಗಳು:

ಈ ಕೆಳಗಿನ ವಿಷಯಗಳನ್ನಾಧರಿಸಿ ಸಂಶೋಧಕರಿಂದ, ಯೋಜಕರಿಂದ, ಅಭಿವೃದ್ಧಿ ವ್ಯವಸ್ಥಾಪಕರಿಂದ, ಅರ್ಥಶಾಸ್ತ್ರಜ್ಞರಿಂದ, ಬುದ್ಧಿಜೀವಿಗಳಿಂದ, ಶಾಲಾ (8–10ನೇ ತರಗತಿ) – ಕಾಲೇಜು ವಿದ್ಯಾರ್ಥಿಗಳಿಂದ ಹಾಗೂ ಶಿಕ್ಷಕರಿಂದ ಸಂಶೋಧನಾ ಪ್ರಬಂಧಗಳನ್ನು ಆಹ್ವಾನಿಸಲಾಗಿದೆ.

ಕೆರೆ ಸಮ್ಮೇಳನ 2014ರಲ್ಲಿ ಮಂಡಿಸಲು ಸಂಶೋಧನಾ ಪ್ರಬಂಧ/ಭಿತ್ತಿ ಪತ್ರದ ವಿಷಯಗಳು:

1. ಜೀವ–ವೈವಿಧ್ಯತೆ: ಪಶ್ಚಿಮ ಘಟ್ಟ, ನದಿಗಳು ಮತ್ತು ಕೆರೆಗಳು
2. ಜೌಗು ಭೂಮಿ ಮತ್ತು ಜಡ್ಡಿ ಪ್ರದೇಶ: ಪುನರುಜ್ಜೀವನ, ಸಂರಕ್ಷಣೆ ಮತ್ತು ನಿರ್ವಹಣೆ
3. ಪಶ್ಚಿಮ ಘಟ್ಟ ಪ್ರದೇಶದ ಭೂ–ಕವಚ ಮತ್ತು ಭೂ–ಬಳಕೆಯಲ್ಲಿನ ಬದಲಾವಣೆ
4. ಹವಾಮಾನ ಬದಲಾವಣೆ ಹಾಗೂ ಪಶ್ಚಿಮ ಘಟ್ಟ
5. ಪಶ್ಚಿಮ ಘಟ್ಟ ಪ್ರದೇಶದ ಧಾರಣ ಸಾಮರ್ಥ್ಯ
6. ಪಶ್ಚಿಮ ಘಟ್ಟ ಪ್ರದೇಶದ ನದಿ ಬಯಲುಗಳ/ತಪ್ಪಲಿನ ಧಾರಣ ಸಾಮರ್ಥ್ಯ
7. ಪ್ರಾಕೃತಿಕ ಸರಕು ಮತ್ತು ಸೇವೆಗಳ ಮೌಲ್ಯಮಾಪನ
8. ದೇವರ ಕಾಡು (ಕಾನು, ಪವಿತ್ರ ವನ) ಮತ್ತು ಮಿರಿಸ್ಟಿಕ ಜೌಗು
9. ಪಶ್ಚಿಮ ಘಟ್ಟ ಪ್ರದೇಶದಲ್ಲಿ "ಪರಿಸರ ಪ್ರವಾಸೋದ್ಯಮ" ಮತ್ತು ಇಂಗಾಲದ ಮಾಪನ
10. ಭಾರತದಲ್ಲಿ ಆಹಾರ ಮತ್ತು ಜಲ ಮೂಲಗಳ ಸಂರಕ್ಷಣೆಯ ಅಗತ್ಯತೆಗಳು
11. ಜೌಗು ಭೂಮಿ ಸಂರಕ್ಷಣೆಗೆ ಭೂ–ಸಂವೇದಿ ಮಾಹಿತಿಯ ಉಪಯೋಗಗಳು
12. ನೈಸರ್ಗಿಕ ಮತ್ತು ಮಾನವನಿಂದಾದ ಹಾನಿಗಳು
13. ಸಿಹಿ ನೀರಿನ ಅಧ್ಯಯನ, ಜಲ ಪರಿಸರದ ಅಧ್ಯಯನ, ಜೀವ–ವೈವೀಧ್ಯತೆ ಹಾಗೂ ಜೈವಿಕ ಮೇಲ್ವಿಚಾರಣೆಯ ದೂರದೃಷ್ಟಿ
14. ಪರಿಸರ ಮಾಲಿನ್ಯ – ಭೂ ಮತ್ತು ಜಲ ಪರಿಸರ – ಮೇಲ್ವಿಚಾರಣೆ, ನಿರ್ವಹಣೆ ಹಾಗೂ ಜೈವಿಕ ಪರಿಹಾರಗಳು
15. ಸುಸ್ಥಿರ ವ್ಯವಸಾಯ ಮತ್ತು ಸಾವಯವ ಕೃಷಿ
16. ಸಮುದ್ರ ತೀರದ ಪರಿಸರ ವ್ಯವಸ್ಥೆ – ಜೀವ–ವೈವಿಧ್ಯತೆ, ಪರಿಸರ ಉತ್ಪಾದಕತೆ ಮತ್ತು ಜೀವನೋಪಾಯದ ವಿಷಯಗಳು
17. ಜೌಗು ಭೂಮಿ ಸಂಪನ್ಮೂಲಗಳು ಮತ್ತು ಜೀವನೋಪಾಯ
18. ನವೀಕರಿಸಬಹುದಾದ ಇಂಧನಗಳ ಮಹತ್ವ (ಸೌರಶಕ್ತಿ, ಜೈವಿಕ ಇಂಧನ ಮತ್ತು ಜೈವಿಕ ಶಕ್ತಿ) ಮತ್ತು ಶಕ್ತಿಯ ಮಿತ ಬಳಕೆ
19. ಪರಿಸರ ಶಿಕ್ಷಣ ಮತ್ತು ಸುಸ್ಥಿರ ಅಭಿವೃದ್ಧಿ
20. ಪರಿಸರ ನೈತಿಕತೆ ಮತ್ತು ಹಸಿರು ತಂತ್ರಜ್ಞಾನ

ವಿದ್ಯಾರ್ಥಿಗಳ ಮತ್ತು ಶಿಕ್ಷಕರ ವಿಭಾಗದಲ್ಲಿ 3 ಬಹುಮಾನಗಳಿರುತ್ತವೆ. ಮಾಧ್ಯಮಿಕ (8, 9, 10); ಕಾಲೇಜ್ (11, 12)ಮತ್ತು ಶಿಕ್ಷಕರು (ಮಾಧ್ಯಮಿಕ ಹಾಗೂ ಕಾಲೇಜ್). ಉತ್ತಮ ಸಂಶೋಧನಾ ಪ್ರಬಂಧಕ್ಕೆ ನೀಡುವ ಈ ಬಹುಮಾನವು ಪ್ರಮಾಣ ಪತ್ರ ಮತ್ತು ಪಾರಿತೋಷಕವನ್ನು ಒಳಗೊಂಡಿರುತ್ತದೆ. ಇದೇ ರೀತಿ ಭಿತ್ತಿ ಪತ್ರಕ್ಕೂ ಸಹ ಬಹುಮಾನವಿರುತ್ತದೆ.

## ಸ್ಥಳ:

**ಪರಿಸರ ಸಭಾಂಗಣ,** (ಸ್ವರ್ಣವಲ್ಲೀ ಮಠದ ಸಭಾಂಗಣ, ಸೋಂದಾ ಮತ್ತು ಲಯನ್ಸ್ ಇಂಗ್ಲೀಷ್ ಶಾಲೆ, ಯಲ್ಲಾಪುರ ರಸ್ತೆ, ಇವುಗಳಲ್ಲಿ ಏಕಕಾಲಕ್ಕೆ ಪ್ರಬಂಧ ಮಂಡನೆ), ಸಿರ್ಸಿ, ಉತ್ತರ ಕನ್ನಡ, ಕರ್ನಾಟಕ. ಸಿರ್ಸಿ ಪಟ್ಟಣವು ಸಮುದ್ರ ಮಟ್ಟದಿಂದ 590 ಮೀ.ಗಳಷ್ಟು ಎತ್ತರದಲ್ಲಿದೆ. ಅಲ್ಲದೇ ಅರಬ್ಬೀ ಸಮುದ್ರಕ್ಕೂ ಹತ್ತಿರದಲ್ಲಿದೆ. ಹೆಚ್ಚಿನ ಮಾಹಿತಿಗಾಗಿ ಈ ಜಾಲತಾಣವನ್ನು ಅನುಸರಿಸಿ: http://www.sirsicity.gov.in/

**ಸ್ಥಳ ಮತ್ತು ಸಂಪರ್ಕ:** ಸಿರ್ಸಿ ಪಟ್ಟಣವು (ಉತ್ತರ ಕನ್ನಡ ಜಿಲ್ಲೆ, ಕರ್ನಾಟಕ ರಾಜ್ಯ) ಪಶ್ಚಿಮ ಘಟ್ಟದ ಮಧ್ಯ ಪ್ರದೇಶದಲ್ಲಿದ್ದು ರಸ್ತೆ, ರೈಲು ಹಾಗೂ ವಾಯು ಸಾರಿಗೆಗಳ ಸಂಪರ್ಕ ಹೊಂದಿದೆ. ಹತ್ತಿರದ ವಿಮಾನ ನಿಲ್ದಾಣಗಳಾದ ಹುಬ್ಬಳ್ಳಿ, ಗೋವಾ ಮತ್ತು ಬೆಂಗಳೂರು 105, 210ಮತ್ತು 440 ಕೀ.ಮೀ. ದೂರದಲ್ಲಿವೆ.

**ಹವಾಮಾನ:** ಸಿರ್ಸಿಯು ಉಷ್ಣವಲಯದ ಹಿತವಾದ ವಾಯುಗುಣವನ್ನು ಹೊಂದಿದ್ದು, ನವೆಂಬರ್‌ನಲ್ಲಿ ಆಹ್ಲಾದಕರ ಹವಾಮಾನವನ್ನು ಹೊಂದಿರುತ್ತದೆ. ಚಳಿಗಾಲದ ಈ ತಿಂಗಳಲ್ಲಿ ಗರಿಷ್ಠ 32° ಸೆ. ಮತ್ತು ಕನಿಷ್ಠ 19° ಸೆ. ಉಷ್ಣಾಂಶ ದಾಖಲಾಗಿದೆ.

## ನೋಂದಣಿಶುಲ್ಕ:

- ಪ್ರತಿನಿಧಿಗಳು: ರೂ. 2500/– ಮತ್ತು ಜೊತೆಯಲ್ಲಿ ಬರುವವರಿಗೆ: ರೂ. 1500/–
- ಸಂಶೋಧಕರು ಮತ್ತು ವಿಶ್ವ ವಿದ್ಯಾಲಯದ ಉಪನ್ಯಾಸಕರು: ರೂ. 2000/–
  (ಎಲ್ಲಾ 3 ದಿನಗಳಲ್ಲಿಯೂ ಹಾಜರಿರಲು ಸಾಧ್ಯವಿರುವವರು ಮಾತ್ರ)
- ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು: ರೂ. 1000/–
  (ಎಲ್ಲಾ 3 ದಿನಗಳಲ್ಲಿಯೂ ಹಾಜರಿರಲು ಸಾಧ್ಯವಿರುವವರು ಮಾತ್ರ)
- ಪದವಿ ವಿದ್ಯಾರ್ಥಿಗಳು: ರೂ. 500/–
  (ಎಲ್ಲಾ 3 ದಿನಗಳಲ್ಲಿಯೂ ಹಾಜರಿರಲು ಸಾಧ್ಯವಿರುವವರು ಮಾತ್ರ)
- ಸ್ಥಳದಲ್ಲಿ ನೋಂದಣಿಗೆ ಅವಕಾಶವಿಲ್ಲ.
- ವಿದ್ಯಾರ್ಥಿಗಳು ಮತ್ತು ಶಿಕ್ಷಕರು (ಶಾಲೆ ಹಾಗೂ ಪದವಿಪೂರ್ವಕಾಲೇಜ್): ಉಚಿತ (ಸ್ವೀಕರಿಸಿದ ಪ್ರಬಂಧ ಮಂಡನೆಗೆ ಮಾತ್ರ, ಎಲ್ಲಾ 3 ದಿನಗಳಲ್ಲಿಯೂ ಹಾಜರಿರಲು ಸಾಧ್ಯವಿರುವವರು ಮಾತ್ರ)

ಸಂಘಟನಾ ಸಮಿತಿಯು, ಆಯ್ಕೆಗೊಂಡ ಪ್ರಬಂಧ/ಭಿತ್ತಿಚಿತ್ರ ಮಂಡನೆಗೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ (ಶಾಲೆ ಹಾಗೂ ಪದವಿಪೂರ್ವಕಾಲೇಜ್) ಉಚಿತ ಪ್ರವೇಶವನ್ನು ನೀಡಲು ಉದ್ದೇಶಿಸಿದೆ. ಭಾಗವಹಿಸಲಿಚ್ಛಿಸುವ ಸರ್ಕಾರಿ ಸಂಸ್ಥೆಗಳ, ಉದ್ಯಮಗಳ ಹಾಗೂ ಇತರ ಎಲ್ಲಾ ಆಕಾಂಕ್ಷಿಗಳು ನೋಂದಣಿಯ ಸಲುವಾಗಿ ರೂ. 2500/–ನ್ನು ಡಿಡಿಯ ಮೂಲಕ ಪಾವತಿಸುವುದು. ಸಂಶೋಧಕರು ಮತ್ತು ವಿಶ್ವ ವಿದ್ಯಾಲಯದ ಉಪನ್ಯಾಸಕರಿಗೆ ನೋಂದಣಿ ಶುಲ್ಕ ರೂ. 2000/– (ಎಲ್ಲಾ 3 ದಿನಗಳಲ್ಲಿಯೂ ಹಾಜರಿರಲು ಸಾಧ್ಯವಿರುವವರಿಗೆ ಮಾತ್ರ). ಭಾಗವಹಿಸಲಿಚ್ಛಿಸುವ ಎಲ್ಲಾ ಆಕಾಂಕ್ಷಿಗಳು ಡಿಡಿಯನ್ನು "**Lake 2014, Indian Institute of Science**",ಇವರ ಪರಾವಾಗಿಪಡೆದು **ಸಂವಹನ ವಿಳಾಸಕ್ಕೆ** ಕಳುಹಿಸಬಹುದು. ಭಾಗವಹಿಸಲು ಅವಕಾಶ ಪಡೆದ ಎಲ್ಲರೂ ನೋಂದಣಿ ಕಿಟ್, ಸಮ್ಮೇಳನದ ಅವಧಿಯಲ್ಲಿ ಮಧ್ಯಾಹ್ನದ ಭೋಜನ ಹಾಗೂ ಉಪಾಹಾರವನ್ನು ಪಡೆಯಲು ಅರ್ಹರು. (ಸಂಗಾತಿಗೆ ನೋಂದಣಿ ಕಿಟ್ ಹೊರತಾಗಿ ಎಲ್ಲವೂ ಲಭ್ಯವಿರುತ್ತದೆ)

## ಪ್ರದರ್ಶನ:

ಪುನರುಜ್ಜೀವನ ಮತ್ತು ಮೌಲ್ಯ ಮಾಪನ ತಂತ್ರಜ್ಞಾನ, ನೀರಿನ ಗುಣಮಟ್ಟ ವಿಶ್ಲೇಷಣೆ, ಭೂ ಮಾಹಿತಿ ವ್ಯವಸ್ಥೆ, ಭೂ ಸ್ಥಾನೀಕರಣ ವ್ಯವಸ್ಥೆ, ದೂರ ಸಂವೇದಿ ವ್ಯವಸ್ಥೆ, ಚಿತ್ರ ಸಂಸ್ಕರಣೆ ಹಾಗೂ ನಕ್ಷಾಶಾಸ್ತ್ರ ಮತ್ತು ಸಮ್ಮೇಳನದ ವಿಷಯಕ್ಕೆ ಸಂಬಂಧಿಸಿದಂತೆ ಕೆಲಸ ಮಾಡುತ್ತಿರುವ ಸಂಘ–ಸಂಸ್ಥೆಗಳ ಉತ್ಪನ್ನಗಳನ್ನು (ತಂತ್ರಾಂಶ ಅಥವಾ ಪರಿಕರ) ಪ್ರದರ್ಶಿಸಲು ಅವಕಾಶ ಕಲ್ಪಿಸಲಾಗಿದೆ. ಸಂಘ–ಸಂಸ್ಥೆಗಳು ರೂ. 20,000/–ವನ್ನು ಪಾವತಿಸುವ ಮೂಲಕ ಭಾಗವಹಿಸಬಹುದು. ನೋಂದಾಯಿತ ಪ್ರದರ್ಶಕರಿಗೆ ಉತ್ಪನ್ನಗಳನ್ನು ಪ್ರಸ್ತುತಪಡಿಸಲು ವೇದಿಕೆಯ ಮೇಲೆ 10 ನಿಮಿಷಗಳ ಕಾಲಾವಕಾಶವನ್ನು ನೀಡಲಾಗುವುದು. ಆಸಕ್ತರು ಡಾ. ಟಿ.ವಿ. ರಾಮಚಂದ್ರ (cestvr@ces.iisc.ernet.in) ಅವರನ್ನು ಸಂಪರ್ಕಿಸಬಹುದು ಹಾಗೂ **"Lake 2014, Indian Institute of Science",**payable at Bangaloreಈ ಹೆಸರಿನಲ್ಲಿ ಡಿಡಿಯನ್ನು ಪಡೆದು **ಸಂವಹನ ವಿಳಾಸಕ್ಕೆ** ಕಳುಹಿಸಬಹುದು.

## ಕಾರ್ಯಕ್ರಮದ ರೂಪುರೇಷೆ:

| ದಿನಾಂಕ | ಪೂರ್ವಾಹ್ನದ ಸಭೆ (9 ರಿಂದ 1) | ಅಪರಾಹ್ನದ ಸಭೆ (2 ರಿಂದ 6) |
|---|---|---|
| ನವೆಂಬರ್ 13, 2014 | ಉದ್ಘಾಟನೆ, ಅಧ್ಯಕ್ಷರ ಮಾತು, ಅಭ್ಯಾಗತರ ಮಾತು, ಹಿರಿಯ ಸಂಶೋಧಕರಿಗೆ ಸನ್ಮಾನ | "ಉತ್ತರ ಕನ್ನಡದ ಸಮಗ್ರ ಪರಿಸರೀಯ ಧಾರಣ ಸಾಮರ್ಥ್ಯ" ಕುರಿತು ಮಂಡನೆ |
| ನವೆಂಬರ್ 14, 2014 | *ವಸ್ತುನಿಷ್ಠ ಸಭೆ:* ಜೀವ–ವೈವಿಧ್ಯತೆ, ಭೂ–ಕವಚ ಮತ್ತು ಭೂ–ಬಳಕೆಯಲ್ಲಿನ ಬದಲಾವಣೆ, ಜಲ ಪರಿಸರ, ಅರಣ್ಯ ಪರಿಸರ, ದೇವರ ಕಾಡು, ಜೌಗು ಭೂಮಿ ಮತ್ತು ಕೃಷಿ, ಪರಿಸರ ನೈತಿಕತೆ ಮತ್ತು ಹಸಿರು ತಂತ್ರಜ್ಞಾನ, ಪರಿಸರ ಮಾಲಿನ್ಯ, ಸಿಹಿ ನೀರಿನ ಅಧ್ಯಯನ. ಶಾಲೆ ಹಾಗೂ ಕಾಲೇಜ್ ವಿದ್ಯಾರ್ಥಿಗಳಿಂದ ಮಂಡನೆ (ಸಮಾನಾಂತರ ಸಭೆಗಳು) | *ವಸ್ತುನಿಷ್ಠ ಸಭೆ:* ಜೌಗು ಭೂಮಿ, ಭೂ ತಾಪ ಹೆಚ್ಚಳ, ಹವಾಮಾನ ಬದಲಾವಣೆ, ಮಿರಿಸ್ಟಿಕ ಜೌಗು, ಪರಿಸರ ಪ್ರವಾಸೋದ್ಯಮ, ನವೀಕರಿಸಬಹುದಾದ ಇಂಧನಗಳ ಮಹತ್ವ, ಸುಸ್ಥಿರ ವ್ಯವಸಾಯ, ಇಂಗಾಲದ ಮಾಪನ, ಪರಿಸರ ಶಿಕ್ಷಣ. ಶಾಲೆ ಹಾಗೂ ಕಾಲೇಜ್ ವಿದ್ಯಾರ್ಥಿಗಳಿಂದ ಮಂಡನೆ (ಸಮಾನಾಂತರ ಸಭೆಗಳು) |
| ನವೆಂಬರ್ 15, 2014 | ಅಭ್ಯಾಗತರ ಮಾತು, ಶಾಲೆ ಹಾಗೂ ಕಾಲೇಜ್ ವಿದ್ಯಾರ್ಥಿಗಳಿಂದ ಮಂಡನೆ (ಅಂತಿಮ ಸುತ್ತು) | ತಜ್ಞರ ತಂಡದ ಚರ್ಚೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ವಂದನಾರ್ಪಣೆ, ಬಹುಮಾನ ಹಾಗೂ ಪ್ರಮಾಣ ಪತ್ರ (ವಿಜೇತರಿಗೆ ಮತ್ತು ಭಾಗವಹಿಸಿದವರಿಗೆ) ವಿತರಣೆ. |
| ನವೆಂಬರ್ 16, 2014 | ಅಧ್ಯಯನ ಪ್ರವಾಸ | |

## ಮಹತ್ವದ ದಿನಗಳು:

| | |
|---|---|
| ಮುಂಚಿತ ನೊಂದಣಿ (ಭಾಗವಹಿಸಲಿಚ್ಛಿಸುವವರಿಗೆ), ನೋಂದಣಿ ನಮೂನೆ, ಪುಟ 9ರಲ್ಲಿ ಲಭ್ಯವಿದೆ | ಜೂನ್ 30, 2014. |
| ನೊಂದಣಿ ನಮೂನೆಯೊಂದಿಗೆ (ಹಾಗೂ ಡಿಡಿ) ಪೂರ್ಣಗೊಂಡ ಸಂಶೋಧನಾ ಪ್ರಬಂಧ/ಭಿತ್ತಿ ಪತ್ರ ಸಲ್ಲಿಕೆ (ಸವಿವರವಾದ ಸಾರಾಂಶ) – ಪ್ರಬಂಧ ಮಂಡಿಸುವ ಪ್ರತಿನಿಧಿಗಳು | ಅಗಸ್ಟ್ 15, 2014 |
| ಸಮಿತಿಯಿಂದ ಸಂಶೋಧನಾ ಪ್ರಬಂಧ/ಭಿತ್ತಿ ಪತ್ರಗಳ ವಿಮರ್ಶೆ | ಅಗಸ್ಟ್ ಮತ್ತು ಸೆಪ್ಟೆಂಬರ್ 2014 |

| | |
|---|---|
| ಪರಿಷ್ಕೃತ ಪ್ರಬಂಧಗಳ ಅಂತಿಮ ಸಲ್ಲಿಕೆ (ವಿಮರ್ಶೆಯ ಪ್ರತಿಕ್ರಿಯೆಗಳಿಗನುಸಾರವಾಗಿ) | ಸೆಪ್ಟೆಂಬರ್ 30, 2014 |
| ಪ್ರಬಂಧ/ಭಿತ್ತಿ ಪತ್ರಗಳ ಸ್ವೀಕೃತಿಯ ಪ್ರಕಟಣೆ (ಜಾಲತಾಣದಲ್ಲಿ) | ಅಕ್ಟೋಬರ್ 30, 2014 |
| ಕೆರೆ ಸಮ್ಮೇಳನ 2014 | ನವೆಂಬರ್ 13, 14, 15, 2014 |
| ಅಧ್ಯಯನ ಪ್ರವಾಸ | ನವೆಂಬರ್ 16, 2014 |

## ಸಂಶೋಧನಾ ಪ್ರಬಂಧಕ್ಕೆ ಆಹ್ವಾನ:

**ವೈಜ್ಞಾನಿಕ ಪ್ರಬಂಧಕ್ಕೆ ಆಹ್ವಾನ:** ಆಸಕ್ತ ಪ್ರತಿನಿಧಿಗಳಿಂದ ಮೌಖಿಕ ಅಥವಾ ಭಿತ್ತಿ ಪತ್ರಗಳ ಮೂಲಕ ಮಂಡಿಸಲು ಕೆಳಗೆ ನೀಡಿರುವ ಮಾರ್ಗಸೂಚಿಗಳಿಗನುಸಾರವಾಗಿ ವೈಜ್ಞಾನಿಕ ಪ್ರಬಂಧಗಳನ್ನು ಆಹ್ವಾನಿಸಲಾಗಿದೆ.

| | |
|---|---|
| Top/bottom margin | 25mm (on first page 35mm) |
| Left/right margin | 25mm (all pages) |
| Typing area | 160 mm x 247 mm (including folio), single space single column |
| Total pages | 8-10 pages including figures, tables, photographs, references etc., if any. |
| Font type | Times New Roman/Arial |
| Title | 14 point **BOLD CAPITALS** |
| Author's Name | **12 point Bold**Upper-Lower (Do not prefix name with/Ms./Dr./Prof.) |
| Affiliation (designation, organisation and place) | *11 point italics* |
| E Mail ID, Telephone number and Mobile | 11 point |
| Organisation web URL | 11 point |
| Main headings | 10 point **BOLD CAPITALS** |
| Subheadings | 10 point **Bold Upper-Lower** |
| Text | 10 point normal |
| Print | Laser Print or letter quality |

**ವಸತಿ:**

ಅಭ್ಯಾಗತರು ಮತ್ತು ಆಹ್ವಾನಿತ ಪ್ರತಿನಿಧಿಗಳಿಗೆ ಸೋಂದಾ ಅತಿಥಿ ಗೃಹದಲ್ಲಿ ವಸತಿಯನ್ನು ಕಲ್ಪಿಸಲಾಗಿದೆ. ವಸ್ತುನಿಷ್ಠ ಸಭೆಯಲ್ಲಿ ಮಂಡಿಸಲು ಆಯ್ಕೆಗೊಂಡ ಪ್ರತಿನಿಧಿಗಳು ಬಯಸಿದಲ್ಲಿ ಹತ್ತಿರದ ಹೋಟೆಲ್‌ಗಳಲ್ಲಿ ವಸತಿ ವ್ಯವಸ್ಥೆ ಮಾಡಲಾಗುವುದು (ಮೊದಲು ಬಂದವರಿಗೆ ಆದ್ಯತೆ). ಲಭ್ಯವಿರುವ ಕೋಣೆ ಮತ್ತು ಹೋಟೆಲ್‌ಗಳ ವಿವರವನ್ನು ಕೆಳಗೆ ಕೋಷ್ಟಕದಲ್ಲಿ ನೀಡಿದೆ. ತಮ್ಮ ಅಗತ್ಯಕ್ಕನುಸಾರ ಆಯ್ಕೆಯನ್ನು ನೋಂದಣಿಯ ಸಮಯದಲ್ಲಿ ತಿಳಿಸುವುದು ಮತ್ತು ಅವಶ್ಯವಿರುವ ಮೊತ್ತದ ಡಿಡಿಯನ್ನು ತಪ್ಪದೇ ಕಳುಹಿಸುವುದು.

| **Hotel** | **Room type (Bed room)** | **Tariff per day (INR)** | **Available Rooms (Nos.)** | **Other** |
|---|---|---|---|---|
| Saamrat | Single (Non AC) | 150 | 15 | Extra bed- INR 100 |
| | Double (Non AC) | 450 | 15 | |
| | Suit (Family of 3) | 940 | 3 | |
| Madhuvan | Double (Non AC) | 600 | 5 | |
| | Double (AC) | 1300 | 8 | |
| | Suit (Family) | 2500 | 1 | |
| | Three Bedroom (Non AC) | 830 | 1 | |
| | Three Bedroom (AC) | 1620 | 1 | |
| Panchavati | Double | 450 | 5 | |
| | Double (With TV) | 572 | 11 | |
| | Delux | 676 | 3 | |
| | Delux (AC) | 1030 | 4 | |
| | Three Bedroom (Non AC) | 624 | 1 | |
| | Suit (Couple) | 1620 | 2 | |
| Areca Valley Home stay | Double room | 1800 | | Extra bed- INR 300 Lunch/Dinner INR 100 |
| | Family of 4 | 2600 | | |
| Yatri Nivas (Swarnavalli) | Single (Non AC) | 250 | 1 | |
| | Double (Non AC) | 250 | 5 | |

## ಸಮ್ಮೇಳನ ಸಂಘಟನಾ ಸಮಿತಿ:

**ಗೌರವಾಧ್ಯಕ್ಷರು:** ಶ್ರೀ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ
ಶ್ರೀ ಸೋಂದಾ ಸ್ವರ್ಣವಲ್ಲೀ ಮಹಾಸಂಸ್ಥಾನಮ್, ಸೋಂದಾ, ಸಿರ್ಸಿ
http://www.swarnavallimatha.org/

**ಅಧ್ಯಕ್ಷರು:** ಡಾ. ಟಿ.ವಿ. ರಾಮಚಂದ್ರ
ಶಕ್ತಿ ಮತ್ತು ಜೌಗುಭೂಮಿ ಸಂಶೋಧನಾ ತಂಡ, ಪರಿಸರ ವಿಜ್ಞಾನ ಕೇಂದ್ರ,
ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು – 560 012

**ಕಾರ್ಯಾಧ್ಯಕ್ಷರು:** ಶ್ರೀ ಅನಂತ ಹೆಗಡೆ ಅಶೀಸರ, ಸಂಚಾಲಕರು ವೃಕ್ಷ ಲಕ್ಷ ಆಂದೋಲನ.

| ಸಂಚಾಲಕರು | ಸಹ–ಸಂಚಾಲಕರು |
|---|---|
| ಡಾ. ಎಂ.ಡಿ. ಸುಭಾಶ್ ಚಂದ್ರನ್, ಐಐಎಸ್ಸಿ, ಕುಮಟಾ | ಶ್ರೀ ನಾರಾಯಣ ಗಡಿಕೈ |
| ಡಾ. ಕೇಶವ ಹೆಗಡೆ, ಕೂರ್ಸೆ, ಉಜಿರೆ | ಶ್ರೀ ಪ್ರಭಾಕರ ಭಟ್ಟ, ಐಐಎಸ್ಸಿ, ಸಿರ್ಸಿ |
| ಡಾ. ಬಿ.ಎಂ. ಕುಮಾರಸ್ವಾಮಿ, ಶಿವಮೊಗ್ಗ | ಶ್ರೀ ಬಿ.ಎಚ್. ರಾಘವೇಂದ್ರ, ಸಾಗರ |
| ಡಾ. ಆರ್. ವಾಸುದೇವ, ಫಾರೆಸ್ಟ್ರಿ ಕಾಲೇಜು, ಸಿರ್ಸಿ | ಶ್ರೀ ಗಣಪತಿ ಬಿ., ಬಿಸ್ಲಕೊಪ್ಪ |
| ಶ್ರೀ ಶಾಂತಾರಾಮ ಸಿದ್ದಿ, ಯಲ್ಲಾಪುರ | ಅಧ್ಯಕ್ಷರು, ಲಯನ್ಸ್ ಕ್ಲಬ್, ಸಿರ್ಸಿ |
| ಶ್ರೀ ಹರಿಶ್ ಆರ್. ಭಟ್, ಐಐಎಸ್ಸಿ | ಅಧ್ಯಕ್ಷರು, ಪರಿಸರ ವರ್ಧಿನಿ, ಯಡಹಳ್ಳಿ, ಸಿರ್ಸಿ |
| ಡಾ. ಪ್ರಕಾಶ ಮೇಸ್ತ, ಐಐಎಸ್ಸಿ, ಕುಮಟಾ | ಶ್ರೀ ಜಿ.ಆರ್. ರಾವ್, ಐಐಎಸ್ಸಿ, ಕುಮಟಾ |
| ಶ್ರೀ ಎಮ್.ಎ. ಖಾನ್, ಕೆ.ಕೆ ಮಾಧ್ಯಮಿಕ ಶಾಲೆ, ಬೆಂಗಳೂರು | ಶ್ರೀ ಗಜೇಂದ್ರ ಗೋರ್ಸಕೊಡಿಗೆ, ಬಾಳೆಹೊನ್ನೂರು |

| ರಾಷ್ಟ್ರೀಯ ವೈಜ್ಞಾನಿಕ ಸಮಿತಿ | ಸ್ಥಳೀಯ ಸಂಘಟನಾ ಸಮಿತಿ |
|---|---|
| ಟಿ.ವಿ. ರಾಮಚಂದ್ರ, ಐಐಎಸ್ಸಿ, ಬೆಂಗಳೂರು | ಪ್ರಹ್ಲಾದ್ ರಾವ್, ಜಿಇ |
| ಎನ್.ವಿ. ಜೋಷಿ, ಐಐಎಸ್ಸಿ, ಬೆಂಗಳೂರು | ಹರೀಶ್ ಕೃಷ್ಣಮೂರ್ತಿ, ವಾಗ್ದೇವಿ ಸಂಸ್ಥೆ |
| ಎಂ.ಡಿ. ಸುಭಾಶ್ ಚಂದ್ರನ್, ಐಐಎಸ್ಸಿ, ಕುಮಟಾ | ವಿಶ್ವಾಸ್ ಆರ್.ಎಸ್., ಗ್ಲೋಬ್ ಟ್ರೋಟರ್ ಸಿಇಓ |
| ಇ.ವಿ. ರಾಮಸ್ವಾಮಿ, ಮಹಾತ್ಮ ಗಾಂಧಿ ವಿಶ್ವವಿದ್ಯಾಲಯ, ಕೊಟ್ಟಾಯಮ್, ಕೇರಳ | ವಲ್ಲೀಶ್ ನಗರ್, ಬೊಷ್ |
| ಎಂ. ಪೃಥ್ವಿರಾಜ್, ಕೆ.ಎಸ್.ಸಿ.ಎಸ್.ಟಿ, ಬೆಂಗಳೂರು | ಮೀರಾ ರಾಜೇಶ್, ಟಿಸಿಎಸ್ |

| | |
|---|---|
| ದೇವಾಶಿಶ್ ಕಾರ್, ಅಸ್ಸಾಮ್ ವಿಶ್ವವಿದ್ಯಾಲಯ, ಸಿಲ್‌ಚರ್ | ರಾಜೇಶ್, ವೋಲ್ವೋ |
| ಎಸ್.ಎನ್. ಪ್ರಸಾದ್, ಐಐಐಟಿ, ಹೈದ್ರಾಬಾದ್ | ಪದ್ಮಾ ಅಶೋಕ್ |
| ದುರ್ಗಾ ಮಾಧವ್ ಮಹಾಪಾತ್ರ, ಐಐಎಸ್ಸಿ, ಬೆಂಗಳೂರು | ಸ್ನೇಹಲತಾ ವಿ.ಕೆ. |
| ರಾಜಶ್ರೀ ರೇ, ಐಐಎಸ್ಸಿ, ಬೆಂಗಳೂರು | ಶ್ರೀವಿದ್ಯಾ |
| ಶ್ವೇತಮಾಲಾ, ಐಐಎಸ್ಸಿ, ಬೆಂಗಳೂರು | ಡಾ. ರಮೇಶ್ ಬಿ., ಚಂದನ ಶಾಲೆ |
| ಭರತ್ ಎಚ್. ಐತಾಳ್, ಐಐಎಸ್ಸಿ, ಬೆಂಗಳೂರು | ವಿನಾಯಕ ಭಟ್ಟ, ಲಯನ್ಸ್ ಶಾಲೆ, ಸಿರ್ಸಿ |
| ಭರತ್ ಸೆಟ್ಟೂರು, ಐಐಎಸ್ಸಿ, ಬೆಂಗಳೂರು | ಎಮ್.ಎಮ್. ಭಟ್ಟ, ಲಯನ್ಸ್ ಶಾಲೆ, ಸಿರ್ಸಿ |
| ವಿನಯ್ ಎಸ್., ಐಐಎಸ್ಸಿ, ಬೆಂಗಳೂರು | ಭೂಮಿನಾಥನ್ ಎಮ್., ಐಐಎಸ್ಸಿ, ಬೆಂಗಳೂರು |
| ಸುಮೇಶ್ ದುದಾನಿ, ಐಐಎಸ್ಸಿ, ಕುಮಟಾ | ಗೌರಿ ಕುಲಕರ್ಣಿ, ಐಐಎಸ್ಸಿ, ಬೆಂಗಳೂರು |
| ಸುದರ್ಶನ್ ಭಟ್ಟ, ಐಐಎಸ್ಸಿ, ಬೆಂಗಳೂರು | ವಿಷ್ಣು ಮುಕ್ರಿ, ಶೀಕಾಂತ ನಾಯ್ಕ, ಐಐಎಸ್ಸಿ, ಬೆಂಗಳೂರು |
| ಬಾಲಚಂದ್ರ ಸಿ., ಐಐಎಸ್ಸಿ, ಕುಮಟಾ | ಮಹಿಮಾ ಭಟ್, ಐಐಎಸ್ಸಿ, ಬೆಂಗಳೂರು |
| ಗಣೇಶ ಹೆಗಡೆ, ಐಐಎಸ್ಸಿ, ಬೆಂಗಳೂರು | ಗಾಯತ್ರಿ ನಾಯ್ಕ, ಐಐಎಸ್ಸಿ, ಬೆಂಗಳೂರು |


**ಸಂವಹನ ವಿಳಾಸ**

ಡಾ. ಟಿ. ವಿ. ರಾಮಚಂದ್ರ

ಅಧ್ಯಕ್ಷರು ಮತ್ತು ಸಂಘಟನಾ ಕಾರ್ಯದರ್ಶಿ, ಕೆರೆ ಸಮ್ಮೇಳನ 2014

ಶಕ್ತಿ ಮತ್ತು ಜೌಗುಭೂಮಿ ಸಂಶೋಧನಾ ತಂಡ, ಪರಿಸರ ವಿಜ್ಞಾನ ಕೇಂದ್ರ, ಟಿಇ–15,

3ನೇ ಮಹಡಿ, ಇ–ಪಾರ್ಶ್ವ, ಜೀವವಿಜ್ಞಾನ ವಿಭಾಗ (ಹೊಸ ಕಟ್ಟಡ)

ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು – 560 012

ದೂರವಾಣಿ: 080 22933099/229333503 (ವಿಸ್ತಾರ 101/107)

ಮಿಂಚಂಚೆ: cestvr@ces.iisc.ernet.in, lake2014@ces.iisc.ernet.in

lake2014symposium@gmail.com

ಸಮ್ಮೇಳನ ಜಾಲತಾಣ: http://ces.iisc.ernet.in/energy

## ಕೆರೆ ಸಮ್ಮೇಳನ 2014: ಪಶ್ಚಿಮ ಘಟ್ಟ ಪ್ರದೇಶದಲ್ಲಿ ಜೌಗುಭೂಮಿ ಪರಿಸರ ವ್ಯವಸ್ಥೆಯ ಸಂರಕ್ಷಣೆ ಮತ್ತು ಸಮರ್ಥ ನಿರ್ವಹಣೆಯ ಕುರಿತು ಸಮ್ಮೇಳನ

ದಿನಾಂಕ: 13–15 ನವೆಂಬರ್, 2014

ಸ್ಥಳ: ಪರಿಸರ ಸಭಾಂಗಣ, ಸಿರ್ಸಿ

### ನೋಂದಣಿ ಪತ್ರ

| | | |
|---|---|---|
| 1 | ಹೆಸರು | |
| 2 | ಹುದ್ದೆ | |
| 3 | ಕಚೇರಿಯ ವಿಳಾಸ | |
| 4 | ಸಂವಹನ ವಿಳಾಸ | |
| 5 | ಮಿಂಚಂಚೆ | |
| 6 | ದೂರವಾಣಿ | |
| 7 | ಜಂಗಮವಾಣಿ | |
| 8 | ಮಂಡನೆಯ ಮಾದರಿ | ಪ್ರಬಂಧ/ಭಿತ್ತಿ ಪತ್ರ: |
| 9 | ಶೀರ್ಷಿಕೆ (ಪ್ರಬಂಧ/ಭಿತ್ತಿ ಪತ್ರ) | |
| 10 | ಇ–ಆವೃತ್ತಿ ಮತ್ತು ಮುದ್ರಿತ ಪ್ರತಿಯನ್ನು ಒಳಗೊಂಡಿದೆಯೇ? (ಇ–ಆವೃತ್ತಿ/CD ಸೋಂಕು ಮುಕ್ತವಾಗಿರಲಿ) | |
| | ಇ–ಆವೃತ್ತಿಯನ್ನು ಮಿಂಚಂಚೆಯ ಮೂಲಕವೂ ಕಳುಹಿಸಬಹುದು | lake2014@ces.iisc.ernet.in;<br>lake2014symposium@gmail.com |
| 11 | ವಸತಿಯ ಅವಶ್ಯಕತೆ | ಬೇಕು/ಬೇಡ: |
| 12 | ಬೇಕಾದಲ್ಲಿ ಹೋಟೆಲ್ ಹೆಸರು ಮತ್ತು ಕೊಠಡಿಯ ಮಾದರಿ | |
| 13 | ವಸತಿಯ ಅವಶ್ಯಕತೆ | ಇಂದ ವರೆಗೆ |
| 14 | ನೋಂದಣಿ ಶುಲ್ಕದ ವಿವರ* | ಮೊತ್ತ: ಡಿಡಿ ಸಂಖ್ಯೆ:<br>ಬ್ಯಾಂಕ್: ದಿನಾಂಕ: |
| 15 | ಸಿರ್ಸಿಗೆ ಆಗಮನ | ದಿನಾಂಕ: ವೇಳೆ: |
| 16 | ವಸತಿ ಶುಲ್ಕದ ವಿವರ* | ಮೊತ್ತ: ಡಿಡಿ ಸಂಖ್ಯೆ:<br>ಬ್ಯಾಂಕ್: ದಿನಾಂಕ: |
| 17 | ಪ್ರಯಾಣದ ವಿವರ<br>ಆಗಮನ | ರೈಲು/ವಿಮಾನ/ಬಸ್ಸು:<br>ಸ್ಥಳ ಮತ್ತು ದಿನಾಂಕ: |
| | ನಿರ್ಗಮನ | ರೈಲು/ವಿಮಾನ/ಬಸ್ಸು:<br>ಸ್ಥಳ ಮತ್ತು ದಿನಾಂಕ: |

(ಎಲ್ಲಾ ವಿವರಗಳನ್ನೂ ದಾಖಲಿಸುವುದು ಅವಶ್ಯ, **ಸಂವಹನ ವಿಳಾಸಕ್ಕೆ** ಕಳುಹಿಸುವುದು)

*Lake 2014, Indian Institute of Science, Bangaloreಇವರ ಪರಾವಾಗಿ ಡಿಡಿಯನ್ನು ಪಡೆಯಬೇಕು.

ಸ್ಥಳ:
ದಿನಾಂಕ:

(ಹಸ್ತಾಕ್ಷರ)